# KARNATAKA LOKAYUKTA

No:UPLOK-1/DE/1149/2017

M.S.Building,
Dr.B.R.Ambedkar Veedhi,
Bengaluru-560001.
Date: 27.11.2023

## ENQUIRY REPORT

:PRESENT:

SHUBHAVEER.B.
Additional Register of Enquiries-9,
Karnataka Lokayukta, Bengaluru.

**Sub**: Departmental enquiry against Sri.M.B.Turumuri, Assistant Executive Engineer PWD Sub- Division, Hanagal - reg.

**Ref**: 1) G.O.No. LoE 362 SeEV 2017, dated: 31.10.2017.

2) Nomination order No.UPLOK-1/DE/1149/2017, dated: 11.12.2017 of Hon'ble Upalokayukta-1, Bengaluru.

This departmental enquiry is initiated against Sri.M.B.Turumuri, Assistant Executive Engineer PWD Sub Division, Hanagal (hereinafter referred to as Delinquent Government Official, for short, DGO).

2. In pursuance of the Government Order cited above, at reference No. 1, Hon'ble Upalokayukta, vide-order, dated 13-12-2017, cited above at reference No.2, has nominated Additional Registrar of Enquiries-9 (for short,

ARE-9) to frame the charges and to conduct enquiry against the aforesaid DGO.

3. The ARE-9 had issued the Articles of Charge to the DGO, enclosing the statement of imputations of misconduct, list of witnesses proposed to be examined and list of documents proposed to be relied, in support of charges and called him to appear before ARE-9.

4. The Articles of Charge issued by ARE-9 against the DGO is as shown infra:

ANNEXURE-1
CHARGE

1) ಆಸನೌ ಆದ ನೀವು– ಸರ್ಕಾರಿ ಸೇವೆಗೆ ಸೇರಿದ ನಂತರ ದೊಡ್ಡಬಳ್ಳಾಪುರ ತಾಲೂಕು ಬಾಲಾಜಿ ಲೇಔಟ್ ಸರ್ವೆ ನಂ.448 ಸೈಟ್ ನಂ.43 ನ್ನು ರೂ.1,80,000/–ಗಳನ್ನು ಕೊಟ್ಟು ಖರೀದಿ ಮಾಡಿದ್ದು ದಾಖಲೆಗಳಿಂದ ಕಂಡುಬಂದಿರುತ್ತದೆ. ಅದೇ ರೀತಿ ಟಿವಿಎಸ್ ಸ್ಕೂಟಿ ಪೆಪ್ ಮೋಟರ ಸೈಕಲನ್ನು ಸರ್ಕಾರಿ ಸೇವೆಗೆ ಸೇರಿದ ನಂತರ ಆಸನೌ ಆದ ನೀವು ನಿಮ್ಮ ಮಗಳ ಹೆಸರಿನಲ್ಲಿ ರೂ. 30,000/– ಗಳಿಗೆ ಖರೀದಿಸಿದ್ದು ಕಂಡುಬರುತ್ತದೆ. ಈ ಬಗ್ಗೆ ಇಲಾಖೆಯಲ್ಲಿ ಅನುಮತಿ ಪಡೆದಿರುವುದಿಲ್ಲ ಹಾಗೂ ಆದಾಯದ ಮೂಲಕ ಬಗ್ಗೆ ವಿವರ ಸಲ್ಲಿಸಿಲ್ಲ, ಅವುಗಳನ್ನು ಖರೀದಿಸುವ ಮುನ್ನ ಸರ್ಕಾರದ ಪೂರ್ವಾನುಮತಿ ಪಡೆಯದೇ ಕರ್ತವ್ಯಲೋಪವೆಸಗಿರುತ್ತೀರಿ.
2) ನೀವು ಉಪಯೋಗಿಸುತ್ತಿರುವ ಮಾರುತಿ ಕಂಪನಿ ಇಕೋ ಫೈವ್ ಸ್ಟಾರ್ ನಂ. ಕೆಎ 27/ಎಂ 4167 ನಿಮ್ಮ ಅತ್ತೆಯವರಾದ ಶ್ರೀಮತಿ ಫಕೀರಮ್ಮ ಬೋಳೆತ್ತಿನವರ ಹೆಸರಿನಲ್ಲಿದ್ದು ಅದನ್ನು ದಿ: 23/6/10 ರಂದು ರೂ. 4 ಲಕ್ಷಗಳಿಗೆ ಖರೀದಿಸಲಾಗಿರುತ್ತದೆ. ನೀವು ಸಧ್ಯ ವಾಸವಾಗಿರುವ ಧಾರವಾಡ ನಗರದ ಫಡಿ ಬಸವೇಶ್ವರ ಕಾಲೋನಿಯಲ್ಲಿರುವ ಮನೆ ಸಿಟಿಎಸ್ ನಂ.87/2/ಬ4ಎ/1ಎ/3ಬಿ/1

ಸಾಯಿಕೃಪಾ ಎನ್ನುವ ಹೆಸರಿನಲ್ಲಿದ್ದು ಅದು ಆರ್‌ಸಿಸಿ ಕಟ್ಟಡವಾಗಿದ್ದು ಅದೂ ಕೂಡ ನಿಮ್ಮ ಅತ್ತೆಯವರಾದ ಶ್ರೀಮತಿ ಫಕೀರಮ್ಮ ಬೋಳೆತ್ತಿನವರ ಹೆಸರಿನಲ್ಲಿದ್ದು ಸುಮಾರು ರೂ.12 ಲಕ್ಷ ಗಳಿಗೆ ಖರೀದಿ ಮಾಡಲಾಗಿದ್ದು ರೂ.80,680/- ಮುದ್ರಾಂಕ ಶುಲ್ಕ ಪಾವತಿ ಮಾಡಲಾಗಿರುತ್ತದೆ. ಈ ಆಸ್ತಿಗಳ ಖರೀದಿ ಬಗ್ಗೆ ನಿಮ್ಮ ಅತ್ತೆಯ ಆದಾಯಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸದೆ ಮತ್ತು ಅವುಗಳನ್ನು ಖರೀದಿಸುವ ಮುನ್ನ ಸರ್ಕಾರದ ಪೂರ್ವಾನುಮತಿ ಪಡೆಯದೇ ಅಕ್ರಮವಾಗಿ ಸಂಪಾದನೆ ಮಾಡಿಕೊಂಡು ಕರ್ತವ್ಯಲೋಪವೆಸಗಿರುತ್ತೀರಿ.

3) ಕರ್ನಾಟಕ ಸರ್ಕಾರದ ಸುತ್ತೋಲೆ ಸಂ.ಸಿಆಸು ಇ6 ಸೇನನಿ 88 ದಿ: 17/9/83 ರ ರೀತ್ಯ ನಾಗರೀಕ ಸೇವಾ ನಡತೆ ನಿಯಮಗಳು ನಿಯಮ 23(2) ಮತ್ತು 23(3)(ಎ) ಪ್ರಕಾರ ನೀವು ನಡೆಸಿರುವ ಎಲ್ಲಾ ವ್ಯವಹಾರಗಳನ್ನು ವಾರ್ಷಿಕ ಅಂತ್ಯದಲ್ಲಿ ವ್ಯವಹಾರಗಳು ಪೂರ್ಣಗೊಂಡ ಒಂದು ತಿಂಗಳೊಳಗೆ ನಿಗದಿತ ಪ್ರಾಧಿಕಾರಕ್ಕೆ ಕಡ್ಡಾಯವಾಗಿ ಸೂಕ್ತ ವಿವರಣೆಯೊಂದಿಗೆ ವರದಿ ಮಾಡದೇ ಕರ್ತವ್ಯಲೋಪವನ್ನು ಹಾಗೂ ದುರ್ನಡತೆ ತೋರಿಸಿರುತ್ತೀರಿ.

ಆದ್ದರಿಂದ, ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

## ಅನುಬಂಧ-2
## ದೋಷಾರೋಪಣೆ ವಿವರ

ದೂರಿನ ಸಂಕ್ಷಿಪ್ತ ವಿವರಣೆ:

ಆ.ಸ.ನೌ.ರವರು ತಮ್ಮ ಹಾಗೂ ತಮ್ಮ ಪತ್ನಿ ಮತ್ತು ಸಂಬಂಧಿಗಳ ಹೆಸರಿನಲ್ಲಿ ಅಕ್ರಮ ಆಸ್ತಿ ಮತ್ತು ಐಷಾರಾಮಿ ವಸತಿ ನಿವೇಶನಗಳನ್ನು ಹೊಂದಿರುತ್ತಾರೆಂದು ಮತ್ತು ಸರ್ಕಾರದ ಅನುದಾನವನ್ನು ದುರುಪಯೋಗ ಪಡಿಸಿಕೊಂಡು ಅಕ್ರಮ ಆಸ್ತಿ ಗಳಿಸಿರುತ್ತಾರೆಂದು ಹೇಳಿದ್ದಾರೆ.

ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಹಾವೇರಿ ಜಿಲ್ಲೆ ಕರ್ನಾಟಕ ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕ (ಇನ್ನು ಮುಂದೆ, 'ತನಿಖಾಧಿಕಾರಿಗಳು'

ಎಂದು ಕರೆಯಲ್ಪಡುತ್ತಾರೆ) ರವರನ್ನು ಕೇಳಲಾಗಿ, ಸದರಿಯವರು ತಮ್ಮ ತನಿಖಾ ವರದಿಯಲ್ಲಿ –

ಆ.ಸ.ನೌ.ರವರು ಮೇ ತಿಂಗಳ 1984 ರಂದು ಸಹಾಯಕ ಅಭಿಯಂತರರೆಂದು ನೇಮಕಗೊಂಡು ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾನಗಲ್ ನಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಆ.ಸ.ನೌ.ರವರು 1990 ರಲ್ಲಿ ಶ್ರೀ. ಶಂಕರಪ್ಪ ಹಾಗೂ ಶ್ರೀಮತಿ. ಫಕೀರಮ್ಮ ಬೋಳೆತ್ತಿನ ರವರ ಮಗಳಾದ ಶ್ರೀಮತಿ. ಸುಮಾರವರನ್ನು ವಿವಾಹವಾಗಿದ್ದು, ಶ್ರೀ. ಶಂಕರಪ್ಪ ಅವರಿಗೆ ಗಂಡು ಮಕ್ಕಳಿಲ್ಲ. ಆ.ಸ.ನೌ.ರವರಿಗೆ (1) ಕು. ಶೃತಿ, 25 ವರ್ಷ, ಎಂಬಿಎ ವಿದ್ಯಾಭ್ಯಾಸ, (2) ಕು. ಸ್ಫೂರ್ತಿ, 23 ವರ್ಷ, ಎಂಟೆಕ್ ವಿದ್ಯಾಭ್ಯಾಸ, (3) ಕು. ಅಧಿತಿ, 20 ವರ್ಷ, ಕಾಲೇಜು ವಿದ್ಯಾಭ್ಯಾಸ, (4) ಕು. ಸೋನಾಲಿ, 18 ವರ್ಷ, ಜೆ.ಎಸ್.ಎಸ್. ಕಾಲೇಜಿನಲ್ಲಿ ವಿದ್ಯಾಭ್ಯಾಸ, ಆ.ಸ.ನೌ.ರವರು ಒಟ್ಟು 22 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು, ಈ ಅವಧಿಯಲ್ಲಿಯ ಋಣಧಾಯಿತ್ವ ಪಟ್ಟಿಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿಲ್ಲ. 2016ರ ವರ್ಷಾಂತ್ಯಕ್ಕೆ ಸಲ್ಲಿಸಿರುವ ಆಸ್ತಿ ವಿವರಣೆಯಲ್ಲಿ, (1) ಬೆಳಗಾವಿ ಜಿಲ್ಲೆ ಬೈಲಹೊಂಗಲ ಸಿಟಿಎಸ್ ನಂ.3769 ಹೆಚ್ 572/ಎ/7ರಲ್ಲಿ ಪಿತ್ರಾರ್ಜಿತ ಮನೆ, (2) ಬೆಳಗಾವಿ ಜಿಲ್ಲೆ ಬೈಲಹೊಂಗಲ ಸರ್ವೆ ನಂ.179/1 ಕ್ಷೇತ್ರ 4 ಎಕರೆ 27 ಗುಂಟೆ ಪಿತ್ರಾರ್ಜಿತ ಹೊಲ, (3) ಬೆಳಗಾವಿ ಜಿಲ್ಲೆ ಬೈಲಹೊಂಗಲ ಸರ್ವೆ ನಂ.147/1 ರ ವಿಸ್ತೀರ್ಣ 1 ಎಕರೆ 32 ಗುಂಟೆ ಹೊಲ, (4) ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರದ ಬಾಲಾಜಿ ಬಡಾವಣೆಯಲ್ಲಿ 30x40 ಅಡಿ ನಿವೇಶನ ಖರೀದಿಸಿರುವುದು ಕಂಡುಬಂದಿದೆ. ಈ ಬಗ್ಗೆ ದಾಖಲೆಗಳಲ್ಲಿ ಬೈಲಹೊಂಗಲದಲ್ಲಿರುವ ಮನೆಯಿಂದ ಮಾಸಿಕ ರೂ.2,500/– ಬಾಡಿಗೆ ಬರುತ್ತಿರುವುದು ಕಂಡುಬಂದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರದ ಬಾಲಾಜಿ ಬಡಾವಣೆಯಲ್ಲಿ 30x40 ಅಡಿ ನಿವೇಶನವನ್ನು ದಿನಾಂಕ: 15/12/2016 ರಂದು ಖರೀದಿಸಿದ್ದು, ಅದಕ್ಕೆ ಸಂಬಂಧಪಟ್ಟಂತೆ ರೂ.1,80,000/–ಗಳನ್ನು ಪಾವತಿಸಲಾಗಿದೆ, ಮುದ್ರಾಂಕ ಶುಲ್ಕ ರೂ.15,300/– ಆಗಿದೆ. 2007ನೇ ವರ್ಷದಲ್ಲಿ ತಮ್ಮ ಮಗಳು ಕು.ಶೃತಿ ಹೆಸರಿನಲ್ಲಿ

ಟಿವಿಎಸ್ ಕಂಪನಿಯ ಸ್ಕೂಟಿ ಪೆಪ್+ ಕೆಎ 27 ಕ್ಯೂ 4997 ರ ವಾಹನವನ್ನು ರೂ.30,000/–ಗಳಿಗೆ ಖರೀದಿಸಿದೆ. ಅಲ್ಲದೇ, ಮಾರುತಿ ಕಂಪನಿಯ ಮಾರುತಿ ಇಕೋ 5 ಎಸ್‌ಟಿಆರ್ ವಾಹನವನ್ನು ದಿ:23/06/2010 ರಂದು ಆ.ಸ.ನೌ.ರವರ ಅತ್ತೆ ಶ್ರೀಮತಿ ಫಕೀರಮ್ಮ ಬೋಳೆತ್ತಿನ ರವರು ರೂ.4 ಲಕ್ಷಗಳಿಗೆ ಖರೀದಿಸಿದ್ದು, ಅದರ ನಂ.ಕೆಎ 27 ಎಂ 4167 ಆಗಿದ್ದು, ಅದರ ನೋಂದಣಿ ಮತ್ತು ತೆರಿಗೆ ಖರ್ಚು ರೂ.46,648/– ಆಗಿದೆ. ಧಾರವಾಡದ ವಾರ್ಡ್ ನಂ.1 ರ ಪಡಿ ಬಸವೇಶ್ವರ ಕಾಲೋನಿಯಲ್ಲಿ ಸಿಟಿಎಸ್ ನಂ.87/2/ಬ/4ಎ/ 1ಎ/3ಬಿ/1 ರಲ್ಲಿ ಸಾಯಿಕೃಪ ಹೆಸರಿನ ನೆಲ ಅಂತಸ್ತು ಹಾಗೂ 1ನೇ ಮಹಡಿಯಿರುವ ಆರ್‌ಸಿಸಿ ಕಟ್ಟಡವಿದ್ದು, ಅದನ್ನು ರೂ.12 ಲಕ್ಷಗಳಿಗೆ ಆ.ಸ.ನೌ.ರವರ ಅತ್ತೆ ಖರೀದಿಸಿದ್ದು, ಮುದ್ರಾಂಕ ಶುಲ್ಕ ರೂ.80,680/– ನ್ನು ಪಾವತಿಸಿದೆ. ಆ.ಸ.ನೌ.ರವರ ಮಾವನ ಹೆಸರಿನಲ್ಲಿ ಮುರಗೋಡ ಹೋಬಳಿ ಹೊಸೂರು ಗ್ರಾಮದಲ್ಲಿ ಸರ್ವೆ ನಂ.1009/1 ರ 7 ಎಕರೆ 15 ಗುಂಟೆ ಜಮೀನು, ಅದೇ ಗ್ರಾಮದ ಸರ್ವೆ ನಂ.606ಪಿ1 ರಲ್ಲಿ 4 ಎಕರೆ 32 ಗುಂಟೆ, ಆ.ಸ.ನೌ.ರವರ ಅತ್ತೆಯ ಹೆಸರಿನಲ್ಲಿ ಚಿಕ್ಕೊಪ್ಪ ಗ್ರಾಮದ ಸರ್ವೆ ನಂ.89/1+2ಬಿ ಕ್ಷೇತ್ರ 5 ಎಕರೆ 5 ಗುಂಟೆ ಜಮೀನಿದೆ. ಸದರಿ ಜಮೀನುಗಳು ಆ.ಸ.ನೌ.ರವರ ಅತ್ತೆ, ಮಾವನಿಗೆ ವಾಟ್ನಿ ಮೂಲಕ ಬಂದಂತಹ ಜಮೀನಾಗಿದೆ. ಆ.ಸ.ನೌ.ರವರು ಸೇವೆಗೆ ಸೇರಿದ ನಂತರ, ದೊಡ್ಡಬಳ್ಳಾಪುರದ ಬಾಲಾಜಿ ಬಡಾವಣೆಯಲ್ಲಿ 30x40 ಅಡಿ ನಿವೇಶನ ಖರೀದಿಸಿರುವುದು, 2007ನೇ ವರ್ಷದಲ್ಲಿ ತಮ್ಮ ಮಗಳು ಕು.ಶೃತಿ ಹೆಸರಿನಲ್ಲಿ ಟಿವಿಎಸ್ ಕಂಪನಿಯ ಸ್ಕೂಟಿ ಪೆಪ್+ ಕೆಎ 27 ಕ್ಯೂ 4997ರ ವಾಹನವನ್ನು ರೂ.30,000/– ಗಳಿಗೆ ಖರೀದಿಸಿರುವುದು ಕಂಡು ಬಂದಿದೆ. ಈ ಬಗ್ಗೆ ಇಲಾಖೆಯಿಂದ ಅನುಮತಿ ಪಡೆದುಕೊಂಡಿಲ್ಲ. ಆ.ಸ.ನೌ.ರವರ ಅತ್ತೆಯ ಹೆಸರಿನಲ್ಲಿ ಮಾರುತಿ ಕಂಪನಿಯ ಮಾರುತಿ ಇಕೋ 5 ಎಸ್‌ಟಿಆರ್ ವಾಹನವನ್ನು ರೂ.4 ಲಕ್ಷಗಳಿಗೆ ಖರೀದಿಸಿದ್ದು ಹಾಗೂ ಆ.ಸ.ನೌ.ರವರ ಅತ್ತೆಯ ಹೆಸರಿನಲ್ಲಿರುವ ಮನೆ, ಸ್ವತ್ತುಗಳು ಬೇನಾಮಿ ಸ್ವತ್ತುಗಳಾಗಿದೆಯೆಂದು ಸಂಶಯ ಉಂಟಾಗಿದೆಯೆಂದು ಹೇಳಿದ್ದಾರೆ.

ತನಿಖಾಧಿಕಾರಿಗಳ ವರದಿಗೆ ಆ.ಸ.ನೌ.ರವರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಆ.ಸ.ನೌ.ರವರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

ಕಡತ ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಕಂಡುಬರುವ ಅಂಶಗಳೇನೆಂದರೆ:

1) ಆ.ಸ.ನೌ.ರವರು ಮೇ, 1984 ರಂದು ಸಹಾಯಕ ಅಭಿಯಂತರರಾಗಿ ನೇಮಕಗೊಂಡು ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾನಗಲ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. 1990ನೇ ವರ್ಷದಲ್ಲಿ ಶ್ರೀಮತಿ ಸುಮಾ ಎಂಬುವವರನ್ನು ವಿವಾಹವಾಗಿ, ಆ.ಸ.ನೌ.ರವರಿಗೆ (1) ಕು. ಶೃತಿ, 25 ವರ್ಷ, ಎಂಬಿಎ ವಿದ್ಯಾಭ್ಯಾಸ, (2) ಕು. ಸ್ಫೂರ್ತಿ, 23 ವರ್ಷ, ಎಂಟೆಕ್ ವಿದ್ಯಾಭ್ಯಾಸ, (3) ಕು. ಅಧಿತಿ, 20 ವರ್ಷ, ಕಾಲೇಜು ವಿದ್ಯಾಭ್ಯಾಸ, (4) ಕು. ಸೋನಾಲಿ, 18 ವರ್ಷ, ಜೆ.ಎಸ್.ಎಸ್. ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಆ.ಸ.ನೌ.ರವರು ಒಟ್ಟು 22 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಆ.ಸ.ನೌ.ರವರು 2016ರ ವರ್ಷಾಂತ್ಯಕ್ಕೆ ಸಲ್ಲಿಸಿರುವ ಋಣದಾಯಿತ್ವ ಪಟ್ಟಿಯಲ್ಲಿ (1) ಬೆಳಗಾವಿ ಜಿಲ್ಲೆ ಬೈಲಹೊಂಗಲ ಸಿಟಿಎಸ್ ನಂ.3769 ಹೆಚ್ 572/ಎ ರಲ್ಲಿ ಪಿತ್ರಾರ್ಜಿತವಾದ ಮನೆ, (2) ಬೆಳಗಾವಿ ಜಿಲ್ಲೆ ಬೈಲಹೊಂಗಲ ಸರ್ವೆ ನಂ.179/1, ಕ್ಷೇತ್ರ 4 ಎಕರೆ 27 ಗುಂಟೆ, ಪಿತ್ರಾರ್ಜಿತ ಜಮೀನು, (3) ಬೆಳಗಾವಿ ಜಿಲ್ಲೆ ಬೈಲಹೊಂಗಲ ಸರ್ವೆ ನಂ.147/1 ರ ವಿಸ್ತೀರ್ಣ 1 ಎಕರೆ 32 ಗುಂಟೆ, ಪಿತ್ರಾರ್ಜಿತ ಜಮೀನುಗಳಿರುವುದು ಕಂಡುಬಂದಿದೆ. ಆದರೆ, ಆ ಅವಧಿಯಲ್ಲಿ ಸದರಿ ಜಮೀನುಗಳಿಂದ ರೂ.25,000/-, ರೂ.70,000/- ಮತ್ತು ರೂ.24,000/- ವ್ಯವಸಾಯದ ಮೂಲಗಳಿಂದ ಆದಾಯ ಬಂದಿರುವ ಬಗ್ಗೆ ತಿಳಿಸಿದ್ದಾರೆ. ಆದರೆ, ಸದರಿ ಜಮೀನುಗಳಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆಗಳಲ್ಲಿ ಬೆಳೆ ವಿವರಣೆಯನ್ನು ನಮೂದಿಸಿಲ್ಲ. ಈ ಬಗ್ಗೆ ಯಾವುದೇ ರಸೀದಿಯನ್ನಾಗಲೀ ಅಥವಾ ಸಂಬಂಧಪಟ್ಟ ದಾಖಲೆಗಳಿಲ್ಲ. ಕಾರಣ, ಸದರಿ ಜಮೀನುಗಳಿಂದ ಬಂದ

ಆದಾಯಕ್ಕೂ, ಋಣಧಾಯಿತ್ವ ಪಟ್ಟಿಯಲ್ಲಿ ನಮೂದಿಸಲಾದ ಆದಾಯಕ್ಕೂ ಸಾಕಷ್ಟು ವ್ಯತ್ಯಾಸ ಕಂಡುಬಂದಿದೆ. ಆ.ಸ.ನೌ.ರವರು ಸರ್ಕಾರಿ ಕೆಲಸಕ್ಕೆ ಸೇರಿದ ನಂತರ (1) ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ಬಾಲಾಜಿ ಬಡಾವಣೆಯಲ್ಲಿ 30x40 ಅಡಿ ನಿವೇಶನವನ್ನು ದಿ:15/12/2016 ರಂದು ಖರೀದಿಸಿದ್ದು, ಅದಕ್ಕೆ ರೂ.1,80,000/-ಗಳನ್ನು ಪಾವತಿಸಿದ್ದು, ಅದಕ್ಕೆ ಮುದ್ರಾಂಕ ಶುಲ್ಕ ರೂ.15,300/- ಗಳಾಗಿವೆ, (2) ಅದೇ ರೀತಿ, ತಮ್ಮ ಮಗಳಾದ ಕು. ಶೃತಿ ರವರ ಹೆಸರಿನಲ್ಲಿ ಟಿವಿಎಸ್ ಕಂಪನಿಯ ಸ್ಕೂಟಿ ಪೆಪ್+ ನಂ.ಕೆಎ 27 ಕ್ಯೂ 4997 ನ್ನು ರೂ.30,000/-ಗಳಿಗೆ ಖರೀದಿಸಿದ್ದಾರೆ, (3) ಮಾರುತಿ ಕಂಪನಿಯ ಇಕೋ 5 ಎಸ್‌ಟಿಆರ್ ವಾಹನವನ್ನು ರೂ.4 ಲಕ್ಷಗಳಿಗೆ ದಿ:23/06/2010 ರಂದು ತಮ್ಮ ಅತ್ತೆ ಶ್ರೀಮತಿ ಫಕೀರಮ್ಮ ಬೋಳೆತ್ತಿನ ರವರ ಹೆಸರಿಗೆ ಖರೀದಿಸಿದ್ದು, ಅದಕ್ಕೆ ಮತ್ತು ತೆರಿಗೆ ಖರ್ಚು ರೂ.46,648/- ಆಗಿದೆ, (4) ಧಾರವಾಡದ ವಾರ್ಡ್ ನಂ.1 ರ ಪಡಿ ಬಸವೇಶ್ವರ ಕಾಲೋನಿಯಲ್ಲಿ ಸಿಟಿಎಸ್ ನಂ.87/2/ಬ/4ಎ/1ಎ/3ಬಿ/1 ರಲ್ಲಿ ಸಾಯಿಕೃಪ ಎಂಬ ಹೆಸರಿನ ನೆಲ ಅಂತಸ್ತು ಹಾಗೂ 1ನೇ ಮಹಡಿಯಲ್ಲಿರುವ ಆರ್‌ಸಿಸಿ ಕಟ್ಟಡವನ್ನು, ಖರೀದಿಸಲು ರೂ.12 ಲಕ್ಷಗಳಿಗೆ ಮುದ್ರಾಂಕ ಶುಲ್ಕ ರೂ.80,680/- ನ್ನು ಪಾವತಿಸಿದ್ದಾರೆ. ಆ.ಸ.ನೌ.ರವರ ಅತ್ತೆಯ ಹೆಸರಿನಲ್ಲಿ ವಾಹನ ಖರೀದಿಸುವ ಬಗ್ಗೆ ಆ.ಸ.ನೌ.ರವರ ಅತ್ತೆಗೆ ಆದಾಯವಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಅದೇ ರೀತಿ, ತಮ್ಮ ಮಗಳು ಕು. ಶೃತಿ ರವರ ಹೆಸರಿನಲ್ಲಿ ದ್ವಿಚಕ್ರ ವಾಹನವನ್ನು ರೂ.30,000/-ಗಳಿಗೆ ಖರೀದಿಸಿದ್ದು, ಸದರಿಯವರಿಗೆ ಆದಾಯವಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ವಾಹನಗಳನ್ನು ಆ.ಸ.ನೌ.ರವರ ಅಕ್ರಮ ಆಸ್ತಿಯಿಂದ ಸಂಪಾದಿಸಿದ ಹಣದಿಂದ ಖರೀದಿಸಿರುವುದು ಕಂಡು ಬಂದಿದೆ. ಆ.ಸ.ನೌ.ರವರು ಈ ಮೇಲೆ ಹೇಳಲಾದ ಎಲ್ಲಾ ಆಸ್ತಿಗಳನ್ನು ತಾವು ನೌಕರಿಗೆ ಸೇರಿದ ನಂತರ ಖರೀದಿಸಿದ್ದು, ಈ ಬಗ್ಗೆ ಖರೀದಿ ಮಾಡುವ ಮೊದಲು ಸರ್ಕಾರದಿಂದ ಪೂರ್ವಾನುಮತಿ ಪಡೆದಿಲ್ಲ.

2) ಕರ್ನಾಟಕ ಸರ್ಕಾರದ ಸುತ್ತೋಲೆ ಸಂ: ಸಿಆಸುಇ 6 ಸೇನನಿ 88 ದಿನಾಂಕ:17/09/1983ರ ಅಧಿಕೃತ ಜ್ಞಾಪನ ರೀತ್ಯಾ "ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, ನಿಯಮ 23(2) ಮತ್ತು 23(3)(ಎ) ಪ್ರಕಾರ, ಯಾವುದೇ ಸರ್ಕಾರಿ ನೌಕರ ತಾವು ನಡೆಸುವ ಎಲ್ಲಾ ವ್ಯವಹಾರಗಳನ್ನು ವಾರ್ಷಿಕ ಅಂತ್ಯದಲ್ಲಿ ವ್ಯವಹಾರಗಳು ಪೂರ್ಣಗೊಂಡ 1 ತಿಂಗಳೊಳಗೆ ನಿಗದಿತ ಪ್ರಾಧಿಕಾರಿಗಳಿಗೆ ಕಡ್ಡಾಯವಾಗಿ ಸೂಕ್ತ ವಿವರಣೆಯೊಂದಿಗೆ ವರದಿ ಮಾಡಬೇಕೆಂದು" ಹೇಳಿದೆ. ಆದರೆ, ಆ.ಸ.ನೌ.ರವರು ತಮ್ಮ ಸೇವಾವಧಿಯಲ್ಲಿ ನಡೆಸಿದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಸಕ್ಷಮ ಪ್ರಾಧಿಕಾರದ ಮುಂದೆ ವರದಿ ಮಾಡಿಲ್ಲ. ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 23 ರಂತೆ ಪ್ರತಿಯೊಬ್ಬ ಸರ್ಕಾರಿ ನೌಕರರು ಮಾರ್ಚ್ ತಿಂಗಳಿಗೆ ಕೊನೆಗೊಳ್ಳುವಂತೆ ತಮ್ಮ ಕುಟುಂಬದ ಸದಸ್ಯರೆಲ್ಲರ ಆಸ್ತಿ ಮತ್ತು ಋಣಭಾರ ಪಟ್ಟಿಯನ್ನು ಸಲ್ಲಿಸಬೇಕಾಗಿರುವುದು ಕಡ್ಡಾಯವಾಗಿದೆ. ಕೃಷಿ ಆದಾಯ ವ್ಯಾಪ್ತಿಗೆ ಸಂಬಂಧಪಟ್ಟಂತೆ ಅವರು ಬೆಳೆದಿರುವ ಕೃಷಿ ಹುಟ್ಟುವಳಿ ವಿವರಗಳಲ್ಲದೆ, ಇಂತಹ ಕೃಷಿ ಭೂಮಿಯನ್ನು ಹೊಂದಿರುವ ಅಧಿಕಾರಿಗಳು ಕೃಷಿ ಉತ್ಪನ್ನದ ಬಗ್ಗೆ ಬೆಳೆದಿರುವ ಪ್ರಮಾಣ, ಬೆಳೆಯ ಸಾಗುವಳಿ ವೆಚ್ಚ ಹಾಗೂ ಮಾರಾಟ ಮಾಡಿದ ಕೃಷಿ ಮಾರುಕಟ್ಟೆ ರಸೀದಿ ಮುಂತಾದ ವಿವರಗಳನ್ನು ಸಂಪೂರ್ಣವಾಗಿ ನೀಡಬೇಕೆಂದು ಸುತ್ತೋಲೆಯಲ್ಲಿದೆ. ಆದರೆ, ಆ.ಸ.ನೌ.ರವರು ತಮ್ಮ ವ್ಯವಸಾಯದ ಜಮೀನುಗಳ ಬಗ್ಗೆ ವರದಿ ಮಾಡಿಲ್ಲ. ಈ ಬಗ್ಗೆ ಕರ್ನಾಟಕ ಸಿವಿಲ್ ಸೇವೆ (ನಡತೆ) ನಿಯಮಗಳು, 1966ರ (ತಿದ್ದುಪಡಿ) ನಿಯಮ 23 ರ ಉಪನಿಯಮ (2)ರನ್ವಯ ಯಾವುದೇ ಸರ್ಕಾರಿ ನೌಕರ ತನ್ನ ಹೆಸರಿನಲ್ಲಾಗಲೀ ಅಥವಾ ತನ್ನ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಯಾವುದೇ ಚರಾ-ಸ್ಥಿರಾಸ್ತಿಗಳನ್ನು ಖರೀದಿ, ಭೋಗ್ಯ, ಬಾಡಿಗೆ, ದಾನ ಅಥವಾ ಇತರೆ ಯಾವುದೇ ಮೂಲಗಳಿಂದ ಪಡೆಯಬೇಕಿದಲ್ಲಿ, ಈ ಬಗ್ಗೆ ಸರ್ಕಾರದ ಪೂರ್ವಾನುಮತಿಯನ್ನು ಕಡ್ಡಾಯವಾಗಿ ಪಡೆಯಲೇ ಬೇಕಿದೆ ಎಂದು ಪರಿಭಾಷಿಸಲಾಗಿದೆ. ಆದರೆ, ಆ.ಸ.ನೌ.ರವರು ಸದರಿ ಜಮೀನುಗಳು

ಮತ್ತು ವಾಹನಗಳನ್ನು ಖರೀದಿಸುವ ಸಂದರ್ಭದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿಲ್ಲ. ಆ.ಸ.ನೌ.ರವರು ತಮ್ಮ ಅತ್ತೆ–ಮಾವನ ಹೆಸರಿನಲ್ಲಿ ಕೆಲವೊಂದು ಜಮೀನುಗಳನ್ನು ಖರೀದಿಸಿದ್ದು, ಸದರಿ ಜಮೀನುಗಳನ್ನು ತಮ್ಮ ಅಕ್ರಮವಾಗಿ ಗಳಿಸಿದ ಆದಾಯದಿಂದ ಖರೀದಿಸಿರುವುದು ಕಂಡುಬಂದಿದೆ;

3) ಆಸನೌ ರವರು ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾನಗಲ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದು, 1984 ರಿಂದ 2016 ರವರೆಗೆ ನಿಯಮಾನುಸಾರ ವೇತನವನ್ನು ಪಡೆದುಕೊಂಡಿರುತ್ತಾರೆಂದು ಹೇಳಿದ್ದಾರೆ. ಆದರೆ, ಪ್ರತಿ ವರ್ಷದ ವೇತನದಲ್ಲಿ ಎಷ್ಟು ಕಟಾವು ಮಾಡಲಾಗಿದೆ? ಮತ್ತು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಎಷ್ಟು ಹಣ ಖರ್ಚಾಗಿದೆ? ಹಾಗೂ ತಮ್ಮ ಕುಟುಂಬ ನಿರ್ವಹಣೆಗೆ ಮಾಡಲಾದ ಖರ್ಚಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಅದೇ ರೀತಿ, ಆ.ಸ.ನೌ.ರವರು ತಮ್ಮ ಸಂಬಳ ಮತ್ತು ಇತರೆ ವ್ಯವಸಾಯದ ಮೂಲಗಳಿಂದ ಬಂದ ಆದಾಯದ ಬಗ್ಗೆ ಆದಾಯ ತೆರಿಗೆ ಇಲಾಖೆಯ ಮುಂದೆ ವರದಿ ಮಾಡಿಲ್ಲ. ಕಾರಣ, ಆ.ಸ.ನೌ.ರವರು ತಮ್ಮ ಮತ್ತು ತಮ್ಮ ಅತ್ತೆ–ಮಾವ ಹಾಗೂ ಮಕ್ಕಳ ಹೆಸರಿನಲ್ಲಿ ಅಕ್ರಮ ಆಸ್ತಿಯನ್ನು ಗಳಿಸಿರುವುದು ದಾಖಲೆಗಳಿಂದ ಕಂಡುಬಂದಿದೆ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ತನಿಖಾಧಿಕಾರಿಗಳ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ಆ.ಸ.ನೌ.ರವರು ತಮ್ಮ ವಿರುದ್ಧದ ನಡಾವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಆ.ಸ.ನೌ.ರವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

ಆಸನೌ ರವರು ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮ 3(i) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದು, ಆಸನೌ ರವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿಯಲ್ಲಿ ಆಸನೌ ರವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಗೌರವಾನ್ವಿತ ಉಪಲೋಕಾಯುಕ್ತರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ. ಅದರಂತೆ, ಗೌರವಾನ್ವಿತ ಉಪಲೋಕಾಯುಕ್ತರವರು, ಅಪರ ನಿಬಂಧಕರು, ವಿಚಾರಣೆಗಳು–9 ರವರಿಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ.

5. As per the above referred Government order, at reference No 1 above, the government accorded permission to the Hon'ble Upalokayukta-1 to initiate enquiry against DGO and as per the said order, Additional Registrar of Enquiries-9 was nominated as Enquiry Officer.

6. On appearance, on 31.5.2018, plea/first oral statement was recorded and DGO did not plead guilty. On 15.11.2018, DGO filed written statement.

7. In the written statement, the DGO, except admitting that the Articles of charge No.1 that the DGO has purchased site No. 43, at Balaji Layout, in Survey No. 448, in Doddaballapur Taluk; denied all other allegations made in the charges. He contends that the said Scooty was purchased by mother-in-law of DGO in the name of his daughter, since mother–in-law of the DGO is

having only one daughter, who is wife of DGO. The father-in-law of DGO was a retired Government servant and the father–in-law and mother–in-law are having altogether more than 17 acres of agricultural land and the father-in-law of DGO is getting Rs. 22,000/-,as pension and since the properties, namely- car and house, mentioned in the Articles of charges No. 2 are independently accrued by father–in-law and mother–in-law of DGO with their own source of income. Hence, the question of obtaining prior permission from the Government by DGO does not arise; because DGO has nothing to do with the said properties, which belong to the parents of his wife. The investigation report filed by DSP, Karnataka Lokayukta, Haveri; itself clearly demonstrates that the father-in-law of DGO was a Government servant and having a agriculture lands and independent income, besides the DGO himself is having agricultural lands from his ancestors and source from his salary. Hence, prays to drop the charges leveled against him.

8. On behalf of the disciplinary authority, the Investigating officer, Sri. Nagaraj Annappa Ambli, was examined as PW-1. Exs.P1 to P3 were marked. DGO did not examine any witness on his side and not marked any document. Hence, questionnaire of DGO, under Rule 11 (18) of CCA (Conduct) Rules was recorded, on 12.1.2023.

9. Heard the submissions of both the sides. On 8.8.2023 on behalf of DGO a memo was filed, stating no other Departmental Enquiry was held against DGO.

10. Hence, the point for consideration is-

(1) Whether the disciplinary authority proves the charges framed against DGO?

11. The finding is, partly affirmative, for the following-

REASONS

12. PW-1, the investigating officer, has mainly deposed that he collected documents from all the departments concerned and he found that the DGO, after joining the duty, purchased TVS Scooty Pep motor cycle in the name of his daughter. But he had not obtained required permission from the department concerned. Ex.P-1 is the investigation report filed by the Deputy Superintendent of Police, Karnataka Lokayukta. Ex.P-2 is the form No. 1 / complaint filed by the complainant. Ex.P-3 is the form No. 2/ affidavit of complainant, submitted by the complainant.

13. With regard to 1st charge it is shown in the investigation report/ Ex.P-1 that the DGO purchased Site No. 43, measuring 30X40 ft., situating in Balaji Layout, in Sy. No. 448, at Chikkaballapura; for Rs.1,80,000/-, excluding registration charges of Rs. 15,300/,- on 28.8.2008. It is the specific case of the disciplinary authority that for purchasing the same DGO has not obtained prior permission. The DGO in his written statement itself has admitted purchasing of the same, but he contends that he has shown the same in APR. But no document is produced by the DGO to that effect to show that the same was mentioned in the APR, or obtained prior sanction. Even though PW-1 has not deposed to that effect, since the DGO has admitted the same in his written statement, it need not be proved. Hence, the disciplinary authority has proved that the said site was purchased by the DGO without prior permission from the disciplinary authority.

14. It is specifically shown in the investigation report that in 2007 the DGO purchased two wheeler, bearing registration No. KA 27 Q 4995, for

Rs. 35,000/-, in the name of his daughter, Shruthi. PW-1 has deposed to that effect. It is specifically contended by the DGO in his written statement that the said Scooty was purchased by mother-in-law of the DGO in the name of his daughter, since the mother-in-law of DGO is having only daughter, who is the wife of DGO. Further it is suggested to PW-1 that the purchase of the said two wheeler was shown in the assets and liability statement of the DGO, filed by him, before the disciplinary authority. If it is contended by DGO that the said aspect has been shown by him in his statement of assets and liability, then it means he has admitted purchasing of the said two wheeler in the name of his daughter during his employement. However he has not produced any material to show the same. As per Rule 23 (iii) of KCS (Conduct) Rules acquisition of movable property by means of gift by the Government employee, or any of his family members, shall be intimated to the competent authority. To establish the same there is no material document field by the DGO in this enquiry. Hence, it probabalise that without obtaining prior permission, from the competent authority, by the DGO, the daughter of DGO acquired the said two wheeler.

15. With regard to 3rd and 4th charges i.e., purchase of Maruthi Eco car, bearing registration No. KA 27 M 4167, on 23.8.2010, for Rs. 4,00,000/- in the name of mother-in-law of the DGO and purchase of site No. CTS 87/2/B/4A/1A/3B/1, situating at Phadi Basaveshwara colony, in Dharwad; by the mother-in-law of the DGO, namely –Phakeeravva, for Rs. 12,00,000/-, excluding registration charges of Rs. 80,680/- and construction of a house therein in 2014, by the mother-in-law of DGO, by spending Rs.20,00,000/- and the said property stands in the name of mother-in-law of DGO. It is only suspected by the Investigating officer, as shown in Ex.P-1/Investigation report

that the said two properties were purchased benami, by the DGO, in the name of his mother. However, the said facts are specifically denied by the DGO in his written statement. PW-1 has not deposed to that effect. Further PW-1 in his cross examination has clearly admitted that the father-in-law of DGO was the Head Master of the High School and retired from the service and from the retirement benefits and from the source of his properties, said car and the said site were purchased and house therein was construed. In the report, Ex.P-1, in page No. 4, para No. 4, it is clearly stated that the mother-in-law and father-in-law were having 17.13 acres of land; the father-in-law was the High School Head Master and he retired from service in the year 2002 and he gets Rs. 22,000/-, per month, as pension. The DGO and his family have been residing with the father and mother of DGO since the wife of DGO is the only daughter of mother-in-law and father-in-law of the DGO. Further when mother-in-law and father-in-law had lands, measuring 17.13 acres and the father-in-law was the Head-Master and he retired from service and he got the pensionary benefits and they are to be considered as the personal income of mother-in-law and father-in-law of the DGO. For purchase of any property by the mother-in-law, or father-in-law, of the DGO from their personal income, there is no need to obtain prior permission from the competent authority, by the DGO. Hence, it cannot be said that DGO should have obtained prior permission to purchase the same by the mother-in-law and father-in-law of the DGO and it cannot also be said that the said properties were acquired by the DGO, benami, in the name of mother-in-law of the DGO and the house therein was constructed by DGO, benami, in the name of his mother-in-law.

16. With regard to 5th Charge, the DGO has contended that he has reported to the competent authority all the particulars of acquisition of properties, either the site in question, or the two wheeler in question (in the name of his daughter). Even though PW-1 has not deposed to that effect the DGO should have produced the assets and liabilities statements of years concerned to establish that he had been reporting the same to the competent authority. Hence, he has violated the Rule 23 (iii) (a) of KCS (Conduct) Rule in that regard. Hence, the disciplinary authority has proved the charges No. 1, 2 and 5 and has failed to prove the charges No. 3 and 4. Hence, Point No. 1 is answered accordingly.

17. Point No. 2; In view of the answer to point No. 1 the following

FINDINGS

18. The Disciplinary Authority has proved charges No. 1, 2, & 5 leveled against DGO.

19. The Disciplinary Authority has not proved the charges No. 3 and 4 leveled against DGO.

20. Hence this report is submitted to Hon'ble Upalokayukta -1 for further action.

21. The date of retirement of DGO is 31.7.2019.

(SHUBHAVEER.B)
Additional Registrar Enquiries-9
Karnataka Lokayukta, Bengaluru

List of witnesses examined on behalf of Disciplinary Authority

| | | |
|---|---|---|
| 1 | PW-1 | Nagaraj Annappa Ambli |

List of documents marked on behalf of Disciplinary Authority

| | |
|---|---|
| Ex.P1 | Investigation Report, dated: 24.1.2017, submitted by PW-1 |
| Ex.P2 | Form No.1 (complaint), submitted by complainant, to Karnataka Lokayukta office |
| Ex.P3 | Form No. 2, Affidavit of complainant, submitted by complainant, to Karnataka Lokayukta office |

List of witnesses examined on behalf of DGO

| |
|---|
| NIL |

List of documents marked on behalf of DGO

| |
|---|
| NIL |

(SHUBHAVEER.B)
Additional Registrar Enquiries-9
Karnataka Lokayukta, Bengaluru

**ಕರ್ನಾಟಕ ಸರ್ಕಾರ**

**ಕರ್ನಾಟಕ ಲೋಕಾಯುಕ್ತ**

ನಂ:ಉಪಲೋಕ್-1/ಡಿಇ/1149/2017/ಎ.ಆರ್.ಇ-09

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560001.
ದಿನಾಂಕ: 29ನೇ ನವೆಂಬರ್ 2023.

**-:: ಶಿಫಾರಸ್ಸು ::-**

ವಿಷಯ: ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಎಂ ಬಿ ತುರುಮುರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಉಪವಿಭಾಗ, ಹಾನಗಲ್ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಆದೇಶ ಸಂಖ್ಯೆ: ಲೋಇ 362 ಸೇಇವಿ 2017, ಬೆಂಗಳೂರು, ದಿನಾಂಕ: 31/10/2017.
(2) ಉಪಲೋಕಾಯುಕ್ತ, ಕರ್ನಾಟಕ ರಾಜ್ಯ ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ. ಉಪಲೋಕ್-1/ಡಿಇ/1149/2017, ಬೆಂಗಳೂರು, ದಿನಾಂಕ: 11/12/2017.
(3) ಅಪರ ನಿಬಂಧಕರು ವಿಚಾರಣೆಗಳು-09, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 27/11/2023.

*****

ಸರ್ಕಾರದ ಆದೇಶ ದಿನಾಂಕ: 31/10/2017 ರಂತೆ ಶ್ರೀ. ಎಂ ಬಿ ತುರುಮುರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಉಪವಿಭಾಗ, ಹಾನಗಲ್ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಅಂದರೆ ಚಿಕ್ಕದಾಗಿ 'ಆ.ಸ.ನೌಕರರು' ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ: ಉಪಲೋಕ್-1/ಡಿಇ/1149/2017, ಬೆಂಗಳೂರು, ದಿನಾಂಕ: 11/12/2017ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-09 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ ಶ್ರೀ. ಎಂ ಬಿ ತುರುಮುರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಉಪವಿಭಾಗ, ಹಾನಗಲ್ ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

## ANNEXURE-1
## CHARGE

ಆಸನೌ ಆದ ನೀವು– ಸರ್ಕಾರಿ ಸೇವೆಗೆ ಸೇರಿದ ನಂತರ **(1)** ದೊಡ್ಡಬಳ್ಳಾಪುರ ತಾಲೂಕು ಬಾಲಾಜಿ ಲೇಔಟ್ ಸರ್ವೆ ನಂ.448 ಸೈಟ್ ನಂ.43 ನ್ನು ರೂ.1,80,000/-ಗಳನ್ನು ಕೊಟ್ಟು ಖರೀದಿ ಮಾಡಿದ್ದು ದಾಖಲೆಗಳಿಂದ ಕಂಡುಬಂದಿರುತ್ತದೆ. **(2)** ಅದೇ ರೀತಿ ಟಿವಿಎಸ್ ಸ್ಕೂಟಿ ಪೆಪ್ ಮೋಟರ ಸೈಕಲನ್ನು ಸರ್ಕಾರಿ ಸೇವೆಗೆ ಸೇರಿದ ನಂತರ ಆಸನೌ ಆದ ನೀವು ನಿಮ್ಮ ಮಗಳ ಹೆಸರಿನಲ್ಲಿ ರೂ. 30,000/- ಗಳಿಗೆ ಖರೀದಿಸಿದ್ದು ಕಂಡುಬರುತ್ತದೆ. ಈ ಬಗ್ಗೆ ಇಲಾಖೆಯಲ್ಲಿ ಅನುಮತಿ ಪಡೆದಿರುವುದಿಲ್ಲ ಹಾಗೂ ಆದಾಯದ ಮೂಲಕ ಬಗ್ಗೆ ವಿವರ ಸಲ್ಲಿಸಿಲ್ಲ, ಅವುಗಳನ್ನು ಖರೀದಿಸುವ ಮುನ್ನ ಸರ್ಕಾರದ ಪೂರ್ವಾನುಮತಿ ಪಡೆಯದೇ ಕರ್ತವ್ಯಲೋಪವೆಸಗಿರುತ್ತೀರಿ.

**(3)** ನೀವು ಉಪಯೋಗಿಸುತ್ತೀರುವ ಮಾರುತಿ ಕಂಪನಿ ಇಕೋ ಫೈವ್ ಸ್ಟಾರ್ ನಂ. ಕೆಎ 27/ಎಂ 4167 ನಿಮ್ಮ ಅತ್ತೆಯವರಾದ ಶ್ರೀಮತಿ ಫಕೀರಮ್ಮ ಬೋಳೆತ್ತಿನವರ ಹೆಸರಿನಲ್ಲಿದ್ದು ಅದನ್ನು ದಿ: 23/6/10 ರಂದು ರೂ. 4 ಲಕ್ಷಗಳಿಗೆ ಖರೀದಿಸಲಾಗಿರುತ್ತದೆ. **(4)** ನೀವು ಸಧ್ಯ ವಾಸವಾಗಿರುವ ಧಾರವಾಡ ನಗರದ ಫಡಿ ಬಸವೇಶ್ವರ ಕಾಲೋನಿಯಲ್ಲಿರುವ ಮನೆ ಸಿಟಿಎಸ್ ನಂ.87/2/ಬ4ಎ/1ಎ/3ಬಿ/1 ಸಾಯಿಕೃಪಾ ಎನ್ನುವ ಹೆಸರಿನಲ್ಲಿದ್ದು ಅದು ಆರ್‌ಸಿಸಿ ಕಟ್ಟಡವಾಗಿದ್ದು ಅದೂ ಕೂಡ ನಿಮ್ಮ ಅತ್ತೆಯವರಾದ ಶ್ರೀಮತಿ ಫಕೀರಮ್ಮ ಬೋಳೆತ್ತಿನವರ ಹೆಸರಿನಲ್ಲಿದ್ದು ಸುಮಾರು ರೂ.12 ಲಕ್ಷ ಗಳಿಗೆ ಖರೀದಿ ಮಾಡಲಾಗಿದ್ದು ರೂ.80,680/- ಮುದ್ರಾಂಕ ಶುಲ್ಕ ಪಾವತಿ ಮಾಡಲಾಗಿರುತ್ತದೆ. ಈ ಆಸ್ತಿಗಳ ಖರೀದಿ ಬಗ್ಗೆ ನಿಮ್ಮ ಅತ್ತೆಯ ಆದಾಯಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸದೆ ಮತ್ತು ಅವುಗಳನ್ನು ಖರೀದಿಸುವ ಮುನ್ನ ಸರ್ಕಾರದ ಪೂರ್ವಾನುಮತಿ ಪಡೆಯದೇ ಅಕ್ರಮವಾಗಿ ಸಂಪಾದನೆ ಮಾಡಿಕೊಂಡು ಕರ್ತವ್ಯಲೋಪವೆಸಗಿರುತ್ತೀರಿ.

**(5)** ಕರ್ನಾಟಕ ಸರ್ಕಾರದ ಸುತ್ತೋಲೆ ಸಂ.ಸಿಆಸು ಇ6 ಸೇನನಿ 88 ದಿ: 17/9/83 ರ ರೀತ್ಯ ನಾಗರೀಕ ಸೇವಾ ನಡತೆ ನಿಯಮಗಳು ನಿಯಮ 23(2) ಮತ್ತು 23(3)(ಎ) ಪ್ರಕಾರ ನೀವು ನಡೆಸಿರುವ ಎಲ್ಲಾ ವ್ಯವಹಾರಗಳನ್ನು ವಾರ್ಷಿಕ ಅಂತ್ಯದಲ್ಲಿ ವ್ಯವಹಾರಗಳು ಪೂರ್ಣಗೊಂಡ ಒಂದು ತಿಂಗಳೊಳಗೆ ನಿಗದಿತ ಪ್ರಾಧಿಕಾರಕ್ಕೆ ಕಡ್ಡಾಯವಾಗಿ ಸೂಕ್ತ ವಿವರಣೆಯೊಂದಿಗೆ ವರದಿ ಮಾಡದೇ ಕರ್ತವ್ಯಲೋಪವನ್ನು ಹಾಗೂ ದುರ್ನಡತೆ ತೋರಿಸಿರುತ್ತೀರಿ.

ಆದ್ದರಿಂದ, ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

4. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು–09), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ ಶ್ರೀ. ಎಂ ಬಿ ತುರುಮುರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಉಪವಿಭಾಗ, ಹಾನಗಲ್ ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು 'ಭಾಗಶ: **ಸಫಲವಾಗಿರುತ್ತದೆ**' ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌಕರರ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ಒಬ್ಬರು ಸಾಕ್ಷಿಯನ್ನು ಅಂದರೆ ಪಿ.ಡಬ್ಲ್ಯೂ–1 ರವರನ್ನು ವಿಚಾರಣೆಗೆ ಒಳಪಡಿಸಿ ಹಾಗೂ ನಿಶಾನೆ ಪಿ–1 ರಿಂದ ಪಿ–3 ರಂತೆ ದಾಖಲಾತಿಗಳನ್ನು ಗುರುತಿಸಲಾಗಿದೆ.

6. ಆ.ಸ.ನೌಕರರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸುವಂತೆ ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

7. ಆ.ಸ.ನೌಕರರ ಪ್ರಥಮ ಮೌಖಿಕ ಹೇಳಿಕೆಯ ಪ್ರಕಾರ ವಿಚಾರಣಾಧಿಕಾರಿಗಳು ಸಲ್ಲಿಸಿರುವ ಮಾಹಿತಿಯಂತೆ, ದಿನಾಂಕ: 31/07/2019 ರಂದು ನಿವೃತ್ತಿ ಹೊಂದಿರುತ್ತಾರೆ.

8. ಆ.ಸ.ನೌಕರರಾದ ಶ್ರೀ. ಎಂ ಬಿ ತುರುಮುರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಉಪವಿಭಾಗ, ಹಾನಗಲ್ ರವರ ವಿರುದ್ಧ ಸಾಭೀತಾಗಿರುವ ಆರೋಪದ ಸ್ವರೂಪವನ್ನು ಹಾಗೂ ಸಂದರ್ಭಗಳ ಸಂಪೂರ್ಣತೆಯನ್ನು ಪರಿಗಣಿಸಿ, ಆರೋಪಗಳನ್ನು ರುಜುವಾತುಪಡಿಸುವಲ್ಲಿ '**ಸಫಲವಾಗಿರುತ್ತದೆ**' ಎಂದು ನಿರ್ಣಯಿಸಿದೆ:–

'ಆ.ಸ.ನೌಕರರಾದ ಶ್ರೀ. ಎಂ ಬಿ ತುರುಮುರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಉಪವಿಭಾಗ, ಹಾನಗಲ್ ರವರ ಪಿಂಚಣಿಯಿಂದ 5% ರಷ್ಟು ಎರಡು ವರ್ಷಗಳ ವರೆಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ'.

9. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

29/11/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತ-1,
ಕರ್ನಾಟಕ ರಾಜ್ಯ.